ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ದಿನಾಂಕಃ 22-08-2017.**

**ಪಾಟೀ ಸವಾಲು ಶ್ರೀ ಕೆ.ಎನ್.ಎಸ್. ವಾದಿ ಪರ ವಕೀಲರಿಂದ.**

ದಾವೆಯನ್ನು ಯಾವ ಪರಿಹಾರ ಕೋರಿ ಸಲ್ಲಿಸಿದ್ದಾರೆ ಎಂದು ಗೊತ್ತಿಲ್ಲ. ವಾದಿ ಯಾರು ಎಂದು ಗೊತ್ತಿಲ್ಲ. ದಾವಾ ಸ್ವತ್ತು ಮೊದಲು ವಿರಭದ್ರಶೆಟ್ಟಿಯವರಿಗೆ ಸೇರಿತ್ತು. ದಾವೆಯನ್ನು 2 ಐಟಂ ಸ್ವತ್ತುಗಳಿಗೆ ಸಂಬಂದಿಸಿದಂತೆ ಸಲ್ಲಿಸಿದ್ದಾರೆ. ದಾವಾ ಸ್ವತ್ತುಗ್ಗಳ ಸರ್ವೆ ನಂ.188, 20/1. ಕ್ರಮವಾಗಿ 20 ಗುಂಟೆ, 37 ಗುಂಟೆ ವಿಸ್ತೀರ್ಣ ಇದೆ. ಸರ್ವೆ ನಂ.120/1 ರ ಪೂರ್ವಕ್ಕೆ-ನಂಜೆಗೌಡ ರವರ ಸ್ವತ್ತು, ಪಶ್ಚಿಮಕ್ಕೆ-ದೊಡ್ಡ ನಾಲೆ, ಉತ್ತರಕ್ಕೆ-ನಂಜೇಗೌಡನ ಸ್ವತ್ತು, ದಕ್ಷಿಣಕ್ಕೆ-ಕೆರೆ. ಸರ್ವೆ ನಂ.188 ರ ಪೂರ್ವಕ್ಕೆ-ಶಾಲೆ, ಪಶ್ಚಿಮಕ್ಕೆ-ದೊಡ್ಡನಾಲೆ, ಉತ್ತರಕ್ಕೆ-ಚಿಕ್ಕನಾಲೆ, ದಕ್ಷಿಣಕ್ಕೆ-ಶಿವಯ್ಯ ರವರ ಜಮೀನು. ದಕ್ಷಿಣಕ್ಕೆ ಇರುವ ಶಿವಯ್ಯ ನನ್ನ ತಾತ.

ಸರ್ವೆ ನಂ.20/1 ರ ಪೂರ್ವಕ್ಕೆ-ರಂಗಸ್ವಾಮಿ ರವರ ಜಮೀನು ಎಂದರೆ ಸರಿಯಲ್ಲ. ಚಿನ್ನಯ್ಯ ಗೊತ್ತು. ಆತನ ಹೆಂಡತಿ ಲಕ್ಷ್ಮಮ್ಮ ಗೊತ್ತು. ಸದರಿಯವರು ಎಲ್ಲಿದ್ದಾರೆ ಎಂದು ಗೊತ್ತಿಲ್ಲ. ಚಿನ್ನಯ್ಯ ತಂದೆಯ ಹೆಸರು ಗೊತ್ತಿಲ್ಲ, ನಮ್ಮ ಊರಿನಲ್ಲಿ ರಂಗಯ್ಯ ಎಂಬುವವರು ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಈ ದಾವೆಯ ವಾದಿಗಳ ಹೆಸರು ಗೊತ್ತಿಲ್ಲ. 1993 ರಲ್ಲಿ ಅಬ್ದುಲ್‌ಸುಬಾನ್ ರವರಿಂದ ಕ್ರಯಕ್ಕೆ ಪಡೆದಿರುವ ವಿಚಾರ ಗೊತ್ತು. ಆದರೆ ಕ್ರಯಪತ್ರವನ್ನು ನೋಡಿಲ್ಲ. ಮುಂದುವರೆದು ವ್ಯವಸಾಯ ಮಾಡುತ್ತಿದ್ದರು ಎಂದು ನುಡಿಯತ್ತಾರೆ. ಅಬ್ದುಲ್ ಸುಬಾನ್ ರವರು ಯಾರು ಎಂದ ಗೊತ್ತಿಲ್ಲ. ದಾವಾ ಸ್ವತುತ್ತಗಳು ಮೂಲತಃ ಯಾರಿಗೆ ಸೇರಿತ್ತು ಎಂದು ಗೊತ್ತಿಲ್ಲ. ದಾವಾ ಸ್ವತುತ್ತಗಳು ಮೂಲತಃ ರಂಗಯ್ಯ ರವರ ಹೆಸರಿನಲ್ಲಿತ್ತು ಎಂದರೆ ನನಗೆ ಗೊತ್ತಿಲ್ಲ.

ಚಿನ್ನಯ್ಯ, ಲಕ್ಷ್ಮಮ್ಮ, ಗೋವಿಂದಯ್ಯ, ರಂಗಯ್ಯ ರವರು ಒಟ್ಟು ಕಟುಂಬದಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ, ಗೋವಿಂದಯ್ಯ ರವರಿಗೆ ಹಕ್ಕು ಇದ್ದರೂ ಕೂಡ ಚಿನ್ನಯ್ಯ ಮತ್ತು ರಂಗಯ್ಯ ರವರು ಸಿ.ವಿ.ಪುಟ್ಟರಾಜು ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರಿಕೆಯಲ್ಲಿ ರಂಗಯ್ಯ ರವರು ತಮ್ಮ ಸ್ವತ್ತನ್ನು ಸಿ.ವಿ.ಪುಟ್ಟರಾಜು ರವರಿಗೆ ಮಾರಾಟ ಮಾಡಿದ್ದಾರೆ ಎಂದು ಹೇಳಿದ್ದೇನೆ ಎಂದರೆ ಸರಿ. ದಾವಾ ಸ್ವತ್ತಿನ ದಾಖಲಾತಿಗಳು ಯಾರಿಂದ ಯಾರ ಹೆಸರಿಗೆ ಬಂದಿವೆ ಎಂದು ಗೊತ್ತಿಲ್ಲ. 3ನೇ ಪ್ರತಿವಾದಿಯ ಗಂಡ ನನಗೆ ಸಂಬಂಧಿಕರಲ್ಲ. 3ನೇ ಪ್ರತಿವಾದಿಯ ಗಂಡ ನನ್ನನ್ನು ಸಾಕ್ಷಿ ಹೇಳುವಂತೆ ನನ್ನನ್ನು ಕರೆದು ತಂದಿದ್ದರು ಎಂದರೆ ಸರಿ. ದಾವಾ ವಸ್ತು ವಿಷಯ ಗೊತ್ತಿಲ್ಲದಿದ್ದರೂ ಕೂಡ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ದಾವಾ ಸ್ವತ್ತು ಪುಟ್ಟರಾಜು ರವರಿಗೆ ಸೇರಿದ್ದಲ್ಲ ಮತ್ತು ವಾದಿಗೆ ಭಾಗಾಂಶದ ಹಕ್ಕಿಲ್ಲ ಎಂದರೆ ಸರಿಯಲ್ಲ, 3ನೇ ಪ್ರತಿವಾದಿಗೆ ಸಹಾಯ ಮಾಡುವ ಸಲುವಾಗಿ ವಾದಿಯ ಸ್ವತ್ತನ್ನು ಕಸಿದುಕೊಳ್ಳುವ ಸಲುವಾಗಿ ರಂಗಯ್ಯ ಗೊತ್ತು ಎಂದು ಸುಳ್ಳು

ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಮೂಲತಃ ರಂಗಯ್ಯ ಬಿನ್ ಚಿನ್ನಯ್ಯ ರವರಿಗೆ ಸೇರಿದ ಸ್ವತ್ತುಗಳು ಎಂದರೆ ಸರಿಯಲ್ಲ, ರಂಗಯ್ಯ ಮತುತ ಚಿನ್ನಯ್ಯ ರವರಿಗೆ ವಾದಿಯನ್ನು ಹೊರತುಪಡಿಸಿ ಮಾರಾಟ ಮಾಡುವ ಹಕ್ಕು ಇಲ್ಲ ಎಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

*(ಎಸ್.ಚಿನ್ನಸ್ವಾಮಿ)*
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ